**3** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು.

<u>ಸಿ.ಸಿ.ನಂ. **313/2020**</u>

ದಿನಾಂಕ: **29-12-2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು ಃ | ರವಿ | ಚಾಸಾ-15, ಪ್ರಾಸ-11 |
| ಗಂಡನ ಹೆಸರು ಃ | ನಂಜುಂಡಪ್ಪ | |
| ವಯಸ್ಸು ಃ | 38 ವರ್ಷ | |
| ಉದ್ಯೋಗ ಃ | ವ್ಯವಸಾಯ | |
| ವಾಸ ಃ | ಕಾಮನಕೆರೆ | |

<u>ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:</u>

ಮೃತ ವ್ಯಕ್ತಿ ನನಗೆ ಗೊತ್ತಿಲ್ಲ ಆತನು ನಮ್ಮ ಪಕ್ಕದ ಊರಿನವರು ಹಾಗೂ ಆತನು ಶಿಕ್ಷಕನಾಗಿ ಕೆಲಸ ನಿರ್ವಹಿಸುತ್ತಿದ್ದರು. ಚಾಸಾ-13 ಮತ್ತು 14 ನನಗೆ ಗೊತ್ತು. ಸುಮಾರು 5-6 ವರ್ಷಗಳ ಹಿಂದೆ ಸಂಜೆ 7-30 - 8-00 ಗಂಟೆ ಸಮಯಕ್ಕೆ ಕಾಮನಕೆರೆ ಹೈಸ್ಕೂಲ್ ಹತ್ತಿರ ಬೈಕನಲ್ಲಿ ಬಿದ್ದಿದ್ದಾರೆ ಎಂಬ ವಿಚಾರ ತಿಳಿದು ಎಲ್ಲರೂ ನೋಡಲು ಹೋಗುತ್ತಿದ್ದರು ಅದರಂತೆ ನಾನು ಕೂಡ ನೋಡಲು ಹೋದೆ. ನಾನು ಚಾಸಾ-13 ರವರ ಬಳಿ ಯಾರು ಎಂದು ಕೇಳಿದಾಗ ಬಿದ್ದಿದ್ದ ವ್ಯಕ್ತಿಯು ಹಿರೇನಲ್ಲೂರು ಗ್ರಾಮದ ಕೃಷ್ಣಮೂರ್ತಿ ಎಂದು ತಿಳಿಸಿರುತ್ತಾರೆ. ನಂತರ ನಾನು ಚಾಸಾ-13 ಮತ್ತು 14 ರವರು ಆತನು ಅಶೋಕ ಲೇ ಲ್ಯಾಂಡ್ ವಾಹನದಲ್ಲಿ ಕಡೂರಿನ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿರುತ್ತೇವೆ. ಸದರಿ ವ್ಯಕ್ತಿಯ ಮೊಬೈಲ್ ಫೋನ್ ಚಾಸಾ-13 ರವರ ಬಳಿ ಇದ್ದು, ಚಾಸಾ-9 ರವರು ಸದರಿ ಮೊಬೈಲ್ ಗೆ ಕರೆ ಮಾಡಿದಾಗ ಚಾಸಾ-13 ರವರು ಅಪಘಾತವಾದ ವಿಚಾರವನ್ನು ಚಾಸಾ-9 ರವರಿಗೆ ತಿಳಿಸಿರುತ್ತಾರೆ. ನಂತರ ಎಲ್ಲರೂ ಸೇರಿ ಆತನನ್ನು ಆಸ್ಪತ್ರೆಗೆ ದಾಖಲಿಸಿ ನಾನು ನನ್ನ ಊರಿಗೆ ಹೋಗಿರುತ್ತೇನೆ. ನಂತರ ಏನಾಯಿತು ಎಂದು ನಾನು ತಿಳಿದುಕೊಂಡಿರುವುದಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

**(**ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀ ಸವಾಲನ್ನು ಮಾಡಲು ಮಾನ್ಯ ಸಸಅ ಅವರು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು**)**

<u>ಪಾಟೀಸವಾಲು: ಮಾನ್ಯ ಸಸಅ. ರವರಿಂದ ಃ</u>

ದಿನಾಂಕ: 06.12.2019 ರಂದು ಕಾಮನಕೆರೆಯ ಹೈಸ್ಕೂಲ್ ಮುಂಭಾಗದ ರಸ್ತೆಯ ಎಡಭಾಗದಲ್ಲಿ ಅಪಘಾತವಾಗಿ ಬಿದ್ದಿದ್ದು ಹಿರೇನಲ್ಲೂರು ಗ್ರಾಮದ ಶಿಕ್ಷಕರಾದ ಕೃಷ್ಣಮೂರ್ತಿಯವರು ಬಿದ್ದಿದ್ದರು ಎಂದರೆ ಸರಿ. ಯಾವುದೋ ಒಂದು ವಾಹನ ಕೃಷ್ಣಮೂರ್ತಿಯವರು ಚಲಾಯಿಸುತ್ತಿದ್ದ ಬೈಕಿಗೆ ಗುದ್ದಿತ್ತು ಎಂದು ತಿಳಿದುಕೊಂಡೆನು ಎಂದರೆ ಸರಿ. ನಂತರ ಕಡೂರಿನಿಂದ ಹೆಚ್ಚಿನ ಚಿಕಿತ್ಸೆಗಾಗಿ ಆತನನ್ನು ಶಿವಮೊಗ್ಗದ

ಮ್ಯಾಕ್ಸ್ ಆಸ್ಪತ್ರೆಗೆ ದಾಖಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಶಿವಮೊಗ್ಗದ ಮ್ಯಾಕ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೇ ಮದ್ಯರಾತ್ರಿ 2-30 ಗಂಟೆಗೆ ಕೃಷ್ಣಮೂರ್ತಿಯವರು ಮರಣ ಹೊಂದಿರುವ ವಿಚಾರವನ್ನು ನಾನು ತಿಳಿದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಈಗ ಓದಿ ಹೇಳಿರುವಂತೆ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

ಪಾಟೀಸವಾಲುಃ ಆರೋಪಿ ಪರ ಶ್ರೀ. ಎಂ.ಎಸ್.ಎಲ್. ವಕೀಲರಿಂದಃ

ನಾನು ಈ ಅಪಘಾತನ ವಿಚಾರವಾಗಿ ಯಾವತ್ತೂ ಪೊಲೀಸ್ ಠಾಣೆಗೆ ಹೋಗಿಲ್ಲ ಎಂದರೆ ಸರಿ. ಅಪಘಾತ ಯಾರ ತಪ್ಪಿನಿಂದ ಆಗಿತ್ತು ಎಂದು ನನಗೆ ಗೊತ್ತಿಲ್ಲ. ಪೊಲೀಸರಿಗೆ ಹೇಳಿಕೆಯನ್ನು ನಾನು ಆಸ್ಪತ್ರೆಯಲ್ಲಿ ನೀಡಿರುತ್ತೇನೆ. ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡದೇ ಇದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ

Sd/-
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.